SEVA BHARATHI
सेवा ही परमो धर्मः

ಜುಲೈ - 2026
ಸಂಚಿಕೆ - 07
ಸಂಪುಟ - 07

ಮಾಸಿಕ e - ನ್ಯೂಸ್ ಲೆಟರ್

# ಸೇವಾಪಥ

ಸೇವಾಭಾರತಿ (ರಿ.), ಬೆಳ್ತಂಗಡಿ ತಾ||
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ -2022)



ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ - II ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ - 574216



## ಕನ್ಯಾಡಿ ಸೇವಾನಿಕೇತನದಲ್ಲಿ ಸಂಪನ್ನಗೊಂಡ ಉಚಿತ ಫ್ಯಾಬ್ರಿಕ್ ಪೈಂಟ್ ಡಿಸೈನ್ ತರಬೇತಿ ಶಿಬಿರ

## ಸೇವಾಧಾಮದಲ್ಲಿ ಸಂಸ್ಥಾಪಕರ ಹುಟ್ಟುಹಬ್ಬ ಆಚರಣೆ

## ಸೇವಾಭಾರತಿ ತಂಡದಿಂದ ಸಮಾಜ ಸೇವಕರಾದ ಶ್ರೀ ಕಿರಣ್ ಚಂದ್ರ ಡಿ ಪುಷ್ಪಗಿರಿ ಭೇಟಿ

## ಕನ್ಯಾಡಿ ಸೇವಾನಿಕೇತನದಲ್ಲಿ ಶ್ರೀ ನಾಗದೇವರ ಪ್ರತಿಷ್ಠಾಪನೆ

## ಗಾಲಿಕುರ್ಚಿ ಅವರ ವಿಧಿಯಾದರೂ... ಸ್ವಾವಲಂಬನೆ ಅವರ ಆಯ್ಕೆಯಾಯಿತು – ಮಂಗಳೂರಿನ ಶ್ರೀ ಸುಭಾಷ್ ಅವರ ಸ್ಫೂರ್ತಿದಾಯಕ ಪಯಣ

ಯಶೋಗಾಥೆ

Mob,9945491241 I E-mail : sevabharathikanyady@gmail.com I Website : www.sevabharathi.org

## ನಮ್ಮೊಂದಿಷ್ಟು

**ತಮಗೆಲ್ಲರಿಗೂ ನಮಸ್ಕಾರಗಳು**

ಇನ್ನೊಂದು ಹೆಜ್ಜೆಗೆ ತಯಾರಾಗುತ್ತಿದೆ ಮುಂದಿನ ತಿಂಗಳು ನಮ್ಮ ಪ್ರಥಮ ಮಹಡಿಯ ನಿರ್ಮಾಣ ಕೆಲಸ ಮುಗಿದು ಲೋಕಾರ್ಪಣೆಗೊಳ್ಳುವ ಹಂತಕ್ಕೆ ಬಂದಿದೆ. ಈ ಮಹಡಿಗೆ LIC of India ಮತ್ತು New Mangalore Port Authority ಯ CSR ಅನುದಾನವು ಲಭಿಸಿರುವ ಕಾರಣ ಪೂರ್ತಿಗೊಳ್ಳಲು ಸುಲಭವಾಯಿತು. ಈ ಮಹಡಿಯನ್ನು ಫಿಸಿಯೋಥೆರಪಿಗಾಗಿ ಮೀಸಲಾಗಿಟ್ಟಿದ್ದೇವೆ. 2ನೇ ಮಹಡಿಯಲ್ಲಿ ಗೋಡೆ ಕಟ್ಟುವ ಕಾರ್ಯ ಮುಂದುವರೆಯುತ್ತಿದೆ. ಪ್ರಕರ್ಷ leadership conclave ನ ಒಂದು panel ನಲ್ಲಿ 3 ಲೀಡರ್ ಗಳಲ್ಲಿ ನಾನು ಒಬ್ಬನಾಗಿ ಭಾಗವಹಿಸಿದ್ದೆ. ಅನುಭವ ಹೇಳಿಕೊಂಡ ನಂತರ ಎದುರಾದ ಒಂದು ಪ್ರಶ್ನೆ ಗಮನವಿಡಬೇಕಾಗಿದೆ. ನನ್ನ ನಂತರದ ಸಂಸ್ಥೆಯ ನಿರಂತರತೆಗೆ ಏನು ಯೋಜನೆ ನಮ್ಮಲ್ಲಿದೆ? ಎಂಬ ಪ್ರಶ್ನೆ! ಈ ಬಗ್ಗೆ ನಾವು ಯೋಚಿಸಿ ಯೋಜಿಸಿದ್ದೇವೆ. ಧ್ವನಿ ಫೌಂಡೇಶನ್ ನ leadership Transition ಪ್ರೋಗ್ರಾಮ್ ಇದಕ್ಕಾಗಿಯೇ ಯೋಜಿತವಾಗಿದ್ದು ಒಂದುವರೆ ವರ್ಷದ ಅವಧಿಯಲ್ಲಿ ತರಬೇತಿಯು ನಡೆಯಲಿದೆ. ಒಟ್ಟಿನಲ್ಲಿ ಬೇರೆ ಬೇರೆ ಅನುಭವಿಗಳು, ತರಬೇತುದಾರರಿದ್ದ ಈ conclave ಹೊಸ ಅನುಭವ ಸೃಷ್ಟಿಸಿತ್ತು. ಒಟ್ಟಿನಲ್ಲಿ ಸಂಸ್ಥೆಯ ಬೆಳವಣಿಗೆ ಮತ್ತು ನಿರಂತರತೆಗೆ ದಾರಿ ಮಾಡಿಕೊಡುವ ಪ್ರಯತ್ನವಾಗಿತ್ತು.

ನಮ್ಮ ಸೇವಾಭಾರತಿಯ ಸ್ಥಳದಲ್ಲಿ ನಾಗದೇವರ ಹಾಗೂ ದೇವಿಯ ಪ್ರತಿಷ್ಠೆಯನ್ನು ಈ ತಿಂಗಳು ನೆರವೇರಿಸಿರುತ್ತೇವೆ. 20 ವರ್ಷಗಳ ಮೊದಲು ನಡೆದ ಸ್ಥಳ ಪ್ರಶ್ನೆಯ ಆಧಾರದಲ್ಲಿ ಈ ಕಾರ್ಯ ಮಾಡಲಾಗಿದೆ ಒಟ್ಟಿನಲ್ಲಿ ದೇವರ ಆಶೀರ್ವಾದಗಳು ನಮಗೂ ಸುತ್ತಮುತ್ತಲ ನಾಗರಿಕರಿಗೂ ದೊರಕಲಿ ಎನ್ನುವುದು ನಮ್ಮ ಆಶಯ.

ಮುಂದಿನ ತಿಂಗಳು ಆಗಸ್ಟ್ 15ರಂದು ನಮ್ಮ ಬೆಳ್ತಂಗಡಿ ತಾಲೂಕಿನ ಎಲ್ಲಾ ಬೆನ್ನುಹುರಿ ಅಪಘಾತಗೊಂಡ ದಿವ್ಯಾಂಗರಿಗೆ ಸೆಲ್ಫ್ ಕೇರ್ ಕಿಟ್ ಹಾಗೂ ಮೆಡಿಕಲ್ ಕಿಟ್ ಗಳನ್ನು ವಿತರಿಸುವುದಾಗಿ ಯೋಜಿಸಿದ್ದು ತಾಲೂಕಿನ ಸಮಾಜಸೇವಕರು ಧಾರ್ಮಿಕ ಮುಖಂಡರಾದ ಶ್ರೀ ಕಿರಣ್ ಚಂದ್ರ ಪುಷ್ಪಗಿರಿಯವರು ಇದರ ಪ್ರಾಯೋಜಕರಾಗಿದ್ದು ಅವರ ತಾಯಿಯ ನೆನಪಿನಲ್ಲಿ ಯೋಜಿಸುವ ಕಾರ್ಯಕ್ರಮ ಇದಾಗಿದೆ. ಈ ತಿಂಗಳು ಫ್ಯಾಬ್ರಿಕ್ ಪೇಂಟಿಂಗ್ ತರಬೇತಿಯ ಸಮಾರೋಪ ನಡೆದಿದ್ದು ಉತ್ತಮ ಸ್ಪಂದನೆ ದೊರೆತಿದೆ. ಶಿಬಿರಾರ್ಥಿಗಳು ಮಾಡಿದ ಫ್ಯಾಬ್ರಿಕ್ ಪೇಂಟನ್ನು ಕ್ರಮಬದ್ಧವಾಗಿ ಜೋಡಿಸಿಟ್ಟು ವೀಕ್ಷಿಸುವ ಅವಕಾಶವನ್ನು ನೀಡಲಾಗಿದ್ದು ಒಂದು ಉತ್ತಮ ಬೆಳವಣಿಗೆ ಎಂದು ಹೇಳಬಹುದಾಗಿದೆ.

ಉಳಿದಂತೆ ಸೇವಾ ಕಾರ್ಯ ನಿರಂತರವಿದೆ.. ತಮ್ಮೆಲ್ಲರ ಸಹಕಾರವು ಸಿಗುತ್ತಿದೆ



**ಸೇವಾ ಹಿ ಪರಮೋ ಧರ್ಮಃ**

ವಂದನೆಗಳೊಂದಿಗೆ

**ತಮ್ಮವ**

**ಕೆ. ವಿನಾಯಕ ರಾವ್**

## ಜೂನ್ ತಿಂಗಳ ಸೇವಾಪಥ ಬಿಡುಗಡೆ



**ಕನ್ಯಾಡಿ ಸೇವಾಭಾರತಿಯ ಜೂನ್ ತಿಂಗಳ ಸೇವಾಕಾರ್ಯಗಳ ಇ-ನ್ಯೂಸ್‌ಲೆಟರ್ 'ಸೇವಾಪಥ'ವನ್ನು ಸಂಸ್ಥೆಯ ಸಂಚಾಲಕರಾದ ಶ್ರೀ ಪುರಂದರ ರಾವ್ ಹಾಗೂ ಅವರ ಧರ್ಮಪತ್ನಿ, ಸಂಸ್ಥೆಯ ಸೇವಾನಿಧಿ ದಾನಿಗಳಾದ ಶ್ರೀಮತಿ ಜಯಂತಿ ಪುರಂದರ ರವರು ಬಿಡುಗಡೆಗೊಳಿಸಿರುತ್ತಾರೆ.**

### ನಮ್ಮ ವಿಳಾಸ :

**ಪ್ರಧಾನ ಕಚೇರಿ**

ಸೇವಾನಿಕೇತನ, ಕನ್ಯಾಡಿ - II ,ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು
574 216 : 99454 91241

### ಸೇವಾ ಕೇಂದ್ರ :

**ಸೇವಾಧಾಮ ಸೌತಡ್ಕ**

(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ ಕೊಕ್ಕಡ ಗ್ರಾಮ
574 198 : 94482 54888

**ಸೇವಾಧಾಮ ಬೈಂದೂರು**

(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಒತ್ತಡ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರ) ಹೇನಬೇರು ಬೈಂದೂರು, ಪಡುವರಿ ಅಂಚೆ ಮತ್ತು ಗ್ರಾಮ, ಬೈಂದೂರು ತಾಲೂಕು, ಉಡುಪಿ ಜಿಲ್ಲೆ - 576214 : 99010 44895

### ನಮ್ಮ ತಂಡ :

| | | |
|---|---|---|
| ಶ್ರೀ ಕೆ. ವಿನಾಯಕ ರಾವ್ | - | ಅಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | - | ಉಪಾಧ್ಯಕ್ಷರು |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | - | ಕಾರ್ಯದರ್ಶಿ |
| ಶ್ರೀ ಜಯರಾಜ್ ಸಾಲ್ಯಾನ್ | - | ಖಜಾಂಚಿ |
| ಶ್ರೀಮತಿ ಸ್ವರ್ಣಗೌರಿ | - | ಟ್ರಸ್ಟಿ |
| ಶ್ರೀ ಕೆ. ಯು. ಗಿರೀಶ್ ರಾವ್ | - | ಟ್ರಸ್ಟಿ |
| ಶ್ರೀ ಪೃಥ್ವೀಶ | - | ಟ್ರಸ್ಟಿ |

### ಸಲಹಾ ಮಂಡಳಿ :

ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಡಾ. ಎ. ಜಯಕುಮಾರ್ ಶೆಟ್ಟಿ
ಶ್ರೀ ಸುಮಂತ್ ಕುಮಾರ್ ಜೈನ್

### ಸಂಚಾಲಕರು :

| | | |
|---|---|---|
| ಶ್ರೀ ಕೆ. ಪುರಂದರ ರಾವ್ | - | ಸೇವಾಧಾಮ |
| ಶ್ರೀಮತಿ ಮಮತಾ ಬೊಳ್ಮ | - | ಸಬಲಿನಿ |
| ಶ್ರೀ ಅಖಿಲೇಶ್ ಶೆಟ್ಟಿ, ನೇತ್ರಾವತಿ | - | ಆರೋಗ್ಯಮ್ |

# ಕನ್ಯಾಡಿ ಸೇವಾನಿಕೇತನದಲ್ಲಿ ಸಂಪನ್ನಗೊಂಡ ಉಚಿತ ಫ್ಯಾಬ್ರಿಕ್ ಪೈಂಟ್ ಡಿಸೈನ್ ತರಬೇತಿ ಶಿಬಿರ



**ಕನ್ಯಾಡಿ (ಜುಲೈ: 16 ):** ಸೇವಾಭಾರತಿ (ರಿ.), ಕನ್ಯಾಡಿ ಇದರ ನೇತೃತ್ವದಲ್ಲಿ ಸಬಲಿನಿ ಯೋಜನೆಯಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.) ಧರ್ಮಸ್ಥಳ, ಶ್ರೀ ದುರ್ಗಾ ಮಾತೃ ಮಂಡಳಿ ಕನ್ಯಾಡಿ ಇವುಗಳ ಸಹಭಾಗಿತ್ವದಲ್ಲಿ ಮಹಿಳೆಯರಿಗಾಗಿ ಉಚಿತ ಫ್ಯಾಬ್ರಿಕ್ ಪೈಂಟ್ ಡಿಸೈನ್ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಜುಲೈ 16 ರಂದು ಕನ್ಯಾಡಿ ಸೇವಾನಿಕೇತನದಲ್ಲಿ ನಡೆಯಿತು.

ಧರ್ಮಸ್ಥಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ನಿರ್ದೇಶಕರಾದ ಶ್ರೀ ಪ್ರಭಾಕರ ಗೌಡ ಬೊಲ್ಮ ರವರು ಮಾತನಾಡಿ ಕಲಿತಂತ ವಿದ್ಯೆಯನ್ನು ಅರ್ಧಕ್ಕೆ ಕೈ ಬಿಡದೆ ಮುಂದುವರಿಸಿಕೊಂಡು ಹೋಗಿ ಎಂದು ಶುಭಹಾರೈಸಿದರು.

ಕನ್ಯಾಡಿ ಸೇವಾಭಾರತಿಯ ಖಜಾಂಚಿ ಶ್ರೀ ಎ ಜೈರಾಜ್ ಸಾಲ್ಯಾನ್ ರವರು ಮಾತನಾಡಿ, "ಇಂತಹ ತರಬೇತಿಗಳು ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವುದರ ಜೊತೆಗೆ ಸ್ವಉದ್ಯೋಗದ ಅವಕಾಶಗಳನ್ನು ಸೃಷ್ಟಿಸುತ್ತವೆ. ತರಬೇತಿಯಲ್ಲಿ ಪಡೆದ ಜ್ಞಾನ ಮತ್ತು ಕೌಶಲ್ಯವನ್ನು ಜೀವನದಲ್ಲಿ ಅಳವಡಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು. ಸೇವಾಭಾರತಿ ಮುಂದೆಯೂ ಸಮಾಜದ ವಿವಿಧ ವರ್ಗಗಳ ಅಭಿವೃದ್ಧಿಗೆ ಪೂರಕವಾಗುವ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ," ಎಂದು ತಿಳಿಸಿದರು.

ಫ್ಯಾಷನ್ ಡಿಸೈನರ್ ಮತ್ತು ತರಬೇತುದಾರರಾದ ಶ್ರೀಮತಿ ಭವ್ಯಶ್ರೀ ಕೀರ್ತಿರಾಜ್ ರವರು ಎಲ್ಲರಿಗೂ ಶುಭಹಾರೈಸಿ ಸಂತಸ ವ್ಯಕ್ತಪಡಿಸಿದರು. ಧರ್ಮಸ್ಥಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದವರು ಶ್ರೀಮತಿ ಭವ್ಯಶ್ರೀ ಕೀರ್ತಿರಾಜ್ ರವರಿಗೆ ಗೌರವಧನವನ್ನು ನೀಡಿ ಸಹಕರಿಸಿದ್ದಾರೆ. ನಂತರ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಬಂಟರ ಸಂಘ ಉಜಿರೆ ವಲಯದ ಉಪಾಧ್ಯಕ್ಷರಾದ ಶ್ರೀಮತಿ ಪವಿತ್ರಾ ಸುಕುಮಾರ್ ಶೆಟ್ಟಿ, ಟ್ರಸ್ಟಿ ಶ್ರೀಮತಿ ಸ್ವರ್ಣಗೌರಿ, ಕನ್ಯಾಡಿ ಶ್ರೀ ದುರ್ಗಾಮಾತೃ ಮಂಡಳಿ ಅಧ್ಯಕ್ಷರಾದ ಶ್ರೀಮತಿ ಮಮತಾ ಬಿ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಒಟ್ಟು 13 ಮಂದಿ ಶಿಬಿರಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು

ಶ್ರೀ ದುರ್ಗಾಮಾತೃ ಮಂಡಳಿಯ ಕಾರ್ಯದರ್ಶಿ ಶ್ರೀಮತಿ ಚಂದ್ರಾವತಿ ಸ್ವಾಗತಿಸಿ, ಸೇವಾಭಾರತಿ ಡಾಕ್ಯುಮೆಂಟೇಶನ್ ಮಾನಿಟರಿಂಗ್ ಮತ್ತು ಇವ್ಯಾಲ್ಯೂಯೇಷನ್ ಕೋಆರ್ಡಿನೇಟರ್ ಕು. ಸುಮ ಕಾರ್ಯಕ್ರಮ ನಿರೂಪಿಸಿ, ಶ್ರೀಮತಿ ಶ್ವೇತಾ ಧನ್ಯವಾದವಿತ್ತರು.

# ಕನ್ಯಾಡಿ ಸೇವಾನಿಕೇತನದಲ್ಲಿ ಶ್ರೀ ನಾಗದೇವರ ಪ್ರತಿಷ್ಠಾಪನೆ





**ಕನ್ಯಾಡಿ (ಜು. 2):** ಸೇವಾನಿಕೇತನದಲ್ಲಿ ಜುಲೈ 1ರಂದು ವಾಸ್ತುಬಲಿ, ವಾಸ್ತು ಪೂಜೆ ಹಾಗೂ ಶಯ್ಯಾಧಿವಾಸ ಕಾರ್ಯಕ್ರಮಗಳು ನೆರವೇರಿದವು. ಜುಲೈ 2 ರಂದು ಆಶ್ಲೇಷಾ ಬಲಿ ಪೂಜೆ, ಶ್ರೀ ನಾಗದೇವರು ಹಾಗೂ ದೇವಿಯ ಪ್ರತಿಷ್ಠಾಪನೆ ಮತ್ತು ದುರ್ಗಾಪೂಜೆ ಧಾರ್ಮಿಕ ವಿಧಿವಿಧಾನಗಳೊಂದಿಗೆ ನೆರವೇರಿತು. ಕಾರ್ಯಕ್ರಮದಲ್ಲಿ ಗಣ್ಯರು, ಸೇವಾಭಾರತಿ ಪದಾಧಿಕಾರಿಗಳು, ಸ್ವಯಂಸೇವಕರು, ಹಾಗೂ ಸುತ್ತಮುತ್ತಲಿನ ಸಾರ್ವಜನಿಕರು ಉಪಸ್ಥಿತರಿದ್ದರು.

# ಸೇವಾಧಾಮದಲ್ಲಿ ಸಂಸ್ಥಾಪಕರ ಹುಟ್ಟುಹಬ್ಬ ಆಚರಣೆ



**ಸೌತಡ್ಕ (ಜುಲೈ 29):** ಸೇವಾಧಾಮ ಪುನಶ್ಚೇತನ ಕೇಂದ್ರದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಅವರ ಹುಟ್ಟುಹಬ್ಬವನ್ನು 29 ಜುಲೈ, 2026ರಂದು ಸೇವಾಧಾಮದಲ್ಲಿ ಸಂಭ್ರಮದಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಹಾಗಣಪತಿ ಸೇವಾ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಕೆ. ಕೃಷ್ಣ ಭಟ್ ಅವರು ಮಾತನಾಡಿ, "ಶ್ರೀ ಕೆ. ವಿನಾಯಕ ರಾವ್ ಅವರು ಸಮಾಜಸೇವೆಯಲ್ಲಿ ಇನ್ನಷ್ಟು ಸೇವಾ ಕಾರ್ಯಗಳನ್ನು ಮಾಡುವ ಶಕ್ತಿ, ಧೈರ್ಯ ಹಾಗೂ ಉತ್ತಮ ಆರೋಗ್ಯವನ್ನು ಅವರಿಗೆ ಭಗವಂತನು ಕರುಣಿಸಲಿ" ಎಂದು ಹಾರೈಸಿದರು.

ತಮ್ಮ ಹುಟ್ಟುಹಬ್ಬದ ಸಂದರ್ಭದಲ್ಲಿ ಮಾತನಾಡಿದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ತಮ್ಮ ಬದುಕಿನ ಏಳಿಗೆಗೆ ಮಾರ್ಗದರ್ಶನ ಮತ್ತು ಸಹಕಾರ ನೀಡಿದ ಎಲ್ಲರನ್ನು ಕೃತಜ್ಞತೆಯಿಂದ ಸ್ಮರಿಸಿದರು. "ನಾನು ಒಬ್ಬನೇ ಏನನ್ನೂ ಸಾಧಿಸಲು ಸಾಧ್ಯವಿರಲಿಲ್ಲ. ನನ್ನೊಂದಿಗೆ ಹೆಜ್ಜೆ ಹಾಕುತ್ತಿರುವ ವಿಶ್ವಸ್ಥ ಮಂಡಳಿ, ಸಲಹಾ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗ, ಸೇವಾಭಿಮಾನಿಗಳು, ದಾನಿಗಳು ಹಾಗೂ ಸಂಸ್ಥೆಯ ಪ್ರತಿಯೊಬ್ಬ ಕಾರ್ಯಕರ್ತರ ಸಹಕಾರವೇ ನಮ್ಮ ಎಲ್ಲಾ ಸಾಧನೆಗಳ ಹಿಂದಿನ ನಿಜವಾದ ಶಕ್ತಿ. ಈ ಯಶಸ್ಸು ನನ್ನದೊಂದೇ ಅಲ್ಲ, ನಮ್ಮೆಲ್ಲರದು. ಮುಂದಿನ ದಿನಗಳಲ್ಲಿಯೂ ಇದೇ ಸೇವಾಭಾವದಿಂದ ಇನ್ನಷ್ಟು ಜನರ ಬದುಕಿನಲ್ಲಿ ಬೆಳಕು ಮೂಡಿಸುವ ಕಾರ್ಯಗಳನ್ನು ನಾವು ಒಗ್ಗಟ್ಟಿನಿಂದ ಮಾಡೋಣ. ಸಮಾಜ ನಮ್ಮಿಂದ ಏನನ್ನು ನಿರೀಕ್ಷಿಸುತ್ತದೆಯೋ ಅದನ್ನು ಪ್ರಾಮಾಣಿಕವಾಗಿ ನೆರವೇರಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಫಲಾನುಭವಿಗಳು ಸಂಸ್ಥಾಪಕರ ಕುರಿತು ತಮ್ಮ ಅನಿಸಿಕೆಗಳು ಮತ್ತು ಅನುಭವಗಳನ್ನು ಹಂಚಿಕೊಂಡರು. ಇದೇ ಸಂದರ್ಭದಲ್ಲಿ ಸಿಬ್ಬಂದಿ ವರ್ಗದ ಪರವಾಗಿ ಶ್ರೀ ಕೆ. ವಿನಾಯಕ ರಾವ್ ಅವರಿಗೆ ಗೌರವ ಕಾಣಿಕೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಬಾಲಕೃಷ್ಣ, ಶ್ರೀ ದುರ್ಗಾ ಮಾತೃ ಮಂಡಳಿ ಅಧ್ಯಕ್ಷರಾದ ಶ್ರೀಮತಿ ಮಮತಾ ಬೊಲ್ಮ, ದಾನಿಗಳು, ಹಿತೈಷಿಗಳು, ಊರಿನವರು, ಸ್ವಯಂಸೇವಕರು ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಸೇವಾಧಾಮದ ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ಧನೇಂದ್ರ ನಿರೂಪಿಸಿ, ಫಿಸಿಯೋಥೆರಪಿಸ್ಟ್ ಕು. ವಿಖ್ಯಾತಿ ವೈ ಆರ್ ಸ್ವಾಗತಿಸಿದರು., ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕರಾದ ಶ್ರೀ ಮೋಹನ್ ಎಸ್ ಧನ್ಯವಾದವನ್ನು ಸಲ್ಲಿಸಿದರು.

## ಸೇವಾಧಾಮ - ಸೇವಾನಿಕೇತನಕ್ಕೆ ಪ್ರಮುಖರ ಭೇಟಿ



**ಕನ್ಯಾಡಿ (ಜುಲೈ:30)** ಯೂಟ್ಯೂಬರ್ ಹಾಗೂ ಕೃಷಿಕರಾದ ಶ್ರೀ ಚಂದ್ರಶೇಖರ ಏತಡ್ಕ ಮತ್ತು ಆಪ್ತ ಸಲಹಾ ಕೇಂದ್ರದ(ASK) ಕಾರ್ಯದರ್ಶಿ ಶ್ರೀ ಉದಯಶಂಕರ ಪದ್ಯಾಣ ಹಾಗೂ ಅವರ ಕುಟುಂಬಸ್ಥರು ಕನ್ಯಾಡಿ ಸೇವಾನಿಕೇತನ ಮತ್ತು ಸೌತಡ್ಕ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಜುಲೈ 30 ರಂದು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸೇವಾಭಾರತಿ ಅಧ್ಯಕ್ಷರಾದ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ರವರು ಸಂಸ್ಥೆಯ ಸ್ಥಾಪನೆ, ಸೇವಾ ಚಟುವಟಿಕೆಗಳು, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ, ಸ್ವಾವಲಂಬನಾ ಯೋಜನೆಗಳು ಹಾಗೂ ಸಮಾಜಮುಖಿ ಸೇವೆಗಳ ಕುರಿತು ಸಂಕ್ಷಿಪ್ತವಾಗಿ ಮಾಹಿತಿ ನೀಡಿದರು.ಬಳಿಕ ಪ್ರಮುಖರು ಕೇಂದ್ರದ ಪುನಶ್ಚೇತನ ಚಟುವಟಿಕೆಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಸ್ಥೆಯ ಸೇವಾ ಕಾರ್ಯಗಳನ್ನು ಜನಸಾಮಾನ್ಯರಿಗೆ ಪರಿಚಯಿಸುವ ಉದ್ದೇಶದಿಂದ ತಮ್ಮ ಯೂಟ್ಯೂಬ್ ವಾಹಿನಿಗಾಗಿ ಸಂಸ್ಥೆಯ ಕುರಿತು ವಿಶೇಷ ವಿಡಿಯೋ ಚಿತ್ರೀಕರಣ ನಡೆಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಕನ್ಯಾಡಿ ಸೇವಾನಿಕೇತನಕ್ಕೆ ಶ್ರೀ ಪಣಂಬೂರು ಬಾಲಕೃಷ್ಣ ರಾವ್ ಭೇಟಿ



**ಕನ್ಯಾಡಿ (ಜುಲೈ 27):** ಸಂಸ್ಥೆಯ ದಾನಿಗಳಾದ ಶ್ರೀ ಪಣಂಬೂರು ಬಾಲಕೃಷ್ಣ ರಾವ್ ಹಾಗೂ ಅವರ ಧರ್ಮಪತ್ನಿಯವರು ಜುಲೈ 27ರಂದು ಸಂಸ್ಥೆಯ ಪ್ರಧಾನ ಕಾರ್ಯಾಲಯ ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರು ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಅವರು ಸಂಸ್ಥೆಯ ಪ್ರಸಕ್ತ ಸೇವಾಕಾರ್ಯಗಳು ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣ ಕಾಮಗಾರಿಯ ಪ್ರಗತಿಯ ಕುರಿತು ಮಾಹಿತಿ ನೀಡಿದರು. ಅಲ್ಲದೆ, ಸಂಸ್ಥೆಯ ವಿವಿಧ ಸಮಾಜಮುಖಿ ಸೇವಾ ಚಟುವಟಿಕೆಗಳ ಬಗ್ಗೆಯೂ ವಿವರಿಸಿದರು. ಸಂಸ್ಥೆಯ ಸೇವಾ ಚಟುವಟಿಕೆಗಳಿಗೆ ನಿರಂತರವಾಗಿ ಸಹಕಾರ ಮತ್ತು ಬೆಂಬಲ ನೀಡುತ್ತಿರುವ ಶ್ರೀಯುತರಿಗೆ ಈ ಸಂದರ್ಭದಲ್ಲಿ ಸೇವಾಧಾಮದ ಸಂಚಾಲಕರಾದ ಶ್ರೀ ಕೆ ಪುರಂದರ ರಾವ್ ರವರು ಕೃತಜ್ಞತೆ ಸಲ್ಲಿಸಿದರು.

## ಸೌತಡ್ಕ ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ನನ್ನ ಹೆಸರು ಗಿರೀಶ್ ಸಿ. ಕೆ. ನಾನು ದಾವಣಗೆರೆ ಜಿಲ್ಲೆಯ ಚೆನ್ನಗಿರಿ ತಾಲೂಕಿನವನು. ನಾನು ಬೈಕ್‌ನಲ್ಲಿ ಹೋಗುವಾಗ ಕಾರಿಗೆ ಡಿಕ್ಕಿ ಹೊಡೆದು ಅಪಘಾತಕ್ಕೀಡಾದೆ. ಈ ಅಪಘಾತದಿಂದ ನನ್ನ ಬೆನ್ನುಹುರಿಗೆ T4 ಮಟ್ಟದ ಗಾಯವಾಯಿತು. ನಂತರ ನನ್ನ ದಿನನಿತ್ಯದ ಕೆಲಸಗಳಿಗೂ ಮತ್ತೊಬ್ಬರನ್ನು ಅವಲಂಬಿಸಬೇಕಾದ ಪರಿಸ್ಥಿತಿ ಎದುರಾಯಿತು. ಈ ಸಂದರ್ಭದಲ್ಲಿ, ಸಂಪತ್ ಅವರ ಮೂಲಕ ಸೇವಾಧಾಮದ ಬಗ್ಗೆ ತಿಳಿದುಕೊಂಡು ಇಲ್ಲಿಗೆ ಬರುವ ಅವಕಾಶ ದೊರೆಯಿತು. ಸಂಪತ್ ಅವರೂ ಗಾಲಿಕುರ್ಚಿ ಬಳಸುವವರಾಗಿದ್ದು, ಇಲ್ಲಿ ಪುನಶ್ಚೇತನ ಪಡೆದು ಸಾಕಷ್ಟು ವಿಷಯಗಳನ್ನು ಕಲಿತುಕೊಂಡಿದ್ದಾರೆ. ಅವರ ಸಹಾಯದಿಂದ ನಾನು ಇಲ್ಲಿಗೆ ಬಂದು ಪುನಶ್ಚೇತನ ಪಡೆಯುತ್ತಿದ್ದೇನೆ. ಇಲ್ಲಿ ದೊರೆಯುವ ತರಬೇತಿ ಮತ್ತು ಫಿಸಿಯೋಥೆರಪಿಯಿಂದ ಈಗ ನನ್ನ ಕೆಲಸಗಳನ್ನು ನಾನೇ ಮಾಡಿಕೊಳ್ಳುವಷ್ಟು ಸಬಲನಾಗಿದ್ದೇನೆ. ನಮ್ಮ ಜೀವನವನ್ನು ಹೇಗೆ ಸ್ವತಂತ್ರವಾಗಿ ರೂಪಿಸಿಕೊಳ್ಳಬೇಕು ಎಂಬುದನ್ನೂ ಇಲ್ಲಿ ಚೆನ್ನಾಗಿ ತಿಳಿಸಿಕೊಡುತ್ತಾರೆ. ಸೇವಾಧಾಮ ಸಂಸ್ಥೆಯು ಇನ್ನಷ್ಟು ಉತ್ತಮವಾಗಿ ಬೆಳೆಯಲಿ ಮತ್ತು ನಮ್ಮಂತಹವರಿಗೆ ದಾರಿದೀಪವಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಬೇಸಿಗೆಯಲ್ಲಿ ಸ್ವಲ್ಪ ಹೆಚ್ಚು ಬಿಸಿಲು ಇರುವುದರಿಂದ ಫ್ಯಾನ್‌ನ ಗಾಳಿ ಸಾಕಾಗುವುದಿಲ್ಲ. ಈ ಬಗ್ಗೆ ಗಮನಹರಿಸಿ ಅಗತ್ಯ ವ್ಯವಸ್ಥೆ ಮಾಡಿಕೊಡಬೇಕಾಗಿ ವಿನಂತಿಸುತ್ತೇನೆ. ಮುಂದಿನ ದಿನಗಳಲ್ಲಿ ನನ್ನ ಶಿಕ್ಷಣವನ್ನು ಮುಂದುವರಿಸಿ, ಸ್ವತಂತ್ರವಾಗಿ ಜೀವನ ನಡೆಸಲು ಪ್ರಯತ್ನಿಸುತ್ತೇನೆ.

**ಇತೀ ತಮ್ಮ ವಿಶ್ವಾಸಿ - ಶ್ರೀ ಗಿರೀಶ್ ಸಿ ಕೆ, ಚೆನ್ನಗಿರಿ**

## ಬೈಂದೂರು ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ನನಗೆ ದಿನಾಂಕ 06.01.2022ರಂದು ಬೈಕ್ ಅಪಘಾತವಾಗಿ, ಬೆನ್ನುಹುರಿಗೆ ಗಂಭೀರವಾದ ಗಾಯವಾಗಿತ್ತು. ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಲಾಯಿತು. ಕಳೆದ ನಾಲ್ಕು ವರ್ಷಗಳಿಂದ ಕಾಲಿನ ಬಲ ಕಳೆದುಕೊಂಡು, ಹಾಸಿಗೆಯಲ್ಲೇ ಮಲಗುವ ಪರಿಸ್ಥಿತಿಯಲ್ಲಿದ್ದೆ. ಈ ಕಾರಣದಿಂದ ಸೊಂಟದ ಹಿಂಭಾಗದಲ್ಲಿ ಒತ್ತಡದ ಗಾಯಗಳು ಉಂಟಾಗಿದ್ದು, ಉಡುಪಿಯ ಆದರ್ಶ ಆಸ್ಪತ್ರೆಯಲ್ಲಿ ಪ್ಲಾಸ್ಟಿಕ್ ಸರ್ಜರಿ ಶಸ್ತ್ರಚಿಕಿತ್ಸೆಯನ್ನೂ ಮಾಡಿಸಲಾಗಿತ್ತು. ಆದರೂ ಗಾಯವು ಗುಣವಾಗದೆ ಹಾಗೆಯೇ ಇತ್ತು. ಈ ಸಂದರ್ಭದಲ್ಲಿ, ಉಡುಪಿ ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ಶ್ರೀ ಮನೋಜ್ ಅವರು ಬೈಂದೂರಿನ ಸೇವಾಧಾಮದ ಒತ್ತಡ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರದ ಬಗ್ಗೆ ಮಾಹಿತಿ ನೀಡಿ, ಇಲ್ಲಿಗೆ ಬರಲು ಮಾರ್ಗದರ್ಶನ ನೀಡಿದರು. ಸೇವಾಧಾಮಕ್ಕೆ ಸೇರಿದ ನಂತರ, ಸೂಕ್ತ ಆರೈಕೆ ಮತ್ತು ಪುನಶ್ಚೇತನದ ಮೂಲಕ ನನ್ನ ಗಾಯವು ಸಂಪೂರ್ಣವಾಗಿ ಗುಣವಾಗಿ, ನಾನು ದೈಹಿಕವಾಗಿ ಪುನಶ್ಚೇತನಗೊಂಡು ನನ್ನ ಕೆಲಸಗಳನ್ನು ನಾನೇ ಮಾಡಿಕೊಳ್ಳಲು ಸಬಲನಾಗಿದ್ದೇನೆ. ಸೇವಾಧಾಮದ ಸಂಸ್ಥಾಪಕರಿಗೂ ಹಾಗೂ ಸಿಬ್ಬಂದಿ ವರ್ಗದವರಿಗೂ ನನ್ನ ಹೃದಯಪೂರ್ವಕ ಕೃತಜ್ಞತೆಗಳು. ಸೇವಾಧಾಮ ಸಂಸ್ಥೆಯು ಇನ್ನಷ್ಟು ಎತ್ತರಕ್ಕೆ ಬೆಳೆದು, ನಮ್ಮಂತಹ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ದಾರಿದೀಪವಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಮನೆಗೆ ಹೋದ ನಂತರ ಸ್ವತಂತ್ರವಾಗಿ ಬದುಕುತ್ತಾ, ಯಾವುದಾದರೂ ಒಂದು ಸ್ವಯಂ ಉದ್ಯೋಗವನ್ನು ಪ್ರಾರಂಭಿಸಿ, ನಮ್ಮ ಮನೆಯ ತೋಟವನ್ನು ನೋಡಿಕೊಳ್ಳಲು ಆಲೋಚಿಸುತ್ತಿದ್ದೇನೆ.

**ಇತೀ ತಮ್ಮ ವಿಶ್ವಾಸಿ - ಶ್ರೀ ಗಣಪತಿ ಗೊಂಡ, ಬೈಂದೂರು**

# ಸೇವಾನಿಕೇತನದಲ್ಲಿ ವಾರದ ಭಜನೆ



**ಸರ್ವ ಮಂಗಳ ಮಕ್ಕಳ ಕುಣಿತ ಭಜನಾ ತಂಡ**
**ಸರ್ವ ಮಂಗಳ ನಗರ, ಧರ್ಮಸ್ಥಳ**



**ಶ್ರೀ ರಾಮ ಭಜನಾ ಮಂಡಳಿ, ದೊಂಡೋಲೆ**
**ಧರ್ಮಸ್ಥಳ**



**ಶ್ರೀ ಸದಾಶಿವೇಶ್ವರ ಮಕ್ಕಳ ಕುಣಿತ ಭಜನಾ ಮಂಡಳಿ**
**ಪಜಿರಡ್ಕ**



**ದಿವ್ಯಜ್ಯೋತಿ ಮಕ್ಕಳ ಕುಣಿತ ಭಜನಾ ತಂಡ**
**ಮೇಲಿನಡ್ಕ, ಪುದುವೆಟ್ಟು**



**ಷಣ್ಮುಖ ಭಜನಾ ಮಂಡಳಿ ನಾರ್ಯ, ಧರ್ಮಸ್ಥಳ**

# ಪುನಶ್ಚೇತನದ ಹಾದಿಯಲ್ಲಿ ಚೈತನ್ಯ ತುಂಬುವ ಸೇವಾಧಾಮ














ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರದಲ್ಲಿ ದಿವ್ಯಾಂಗರಿಗೆ ಸಮಗ್ರ ಪುನಶ್ಚೇತನ ಸೇವೆಗಳು ಒದಗಿಸಲಾಗುತ್ತದೆ. ಫಿಸಿಯೋಥೆರಪಿ, ಆಕ್ಯುಪೇಶನಲ್ ಥೆರಪಿ, ಒತ್ತಡಗಾಯ ನಿರ್ವಹಣೆ, ವ್ಹೀಲ್ಚೇರ್ ಬಳಕೆ ತರಬೇತಿ,ಲೇಸರ್ ಥೆರಪಿ, ದೈನಂದಿನ ಜೀವನ ಕೌಶಲ್ಯಗಳ ಅಭ್ಯಾಸ, ಮಾನಸಿಕ ಬೆಂಬಲ ಹಾಗೂ ಕುಟುಂಬ ಸಮಾಲೋಚನೆಗಳ ಮೂಲಕ ವ್ಯಕ್ತಿಯ ಸ್ವಾವಲಂಬನೆಯನ್ನು ವೃದ್ಧಿಸಲಾಗುತ್ತದೆ. ಆರೋಗ್ಯ, ಆತ್ಮವಿಶ್ವಾಸ ಮತ್ತು ಗೌರವಯುತ ಜೀವನ ನಡೆಸಲು ಅಗತ್ಯವಾದ ಮಾರ್ಗದರ್ಶನವನ್ನು ಕೇಂದ್ರದ ಮೂಲಕ ನೀಡಲಾಗುತ್ತದೆ.

# ಸಮುದಾಯದಲ್ಲಿ ಸೇವಾಧಾಮದ ಹೆಜ್ಜೆಗಳು









ಸೇವಾಧಾಮವು ಕೇಂದ್ರದ ಸೇವೆಗಳನ್ನು ಸಮುದಾಯದ ಮಟ್ಟಕ್ಕೂ ವಿಸ್ತರಿಸುತ್ತದೆ. ಮನೆ ಭೇಟಿಗಳು, ಸಮುದಾಯ ಜಾಗೃತಿ ಚಟುವಟಿಕೆಗಳು, ಕುಟುಂಬ ಸದಸ್ಯರಿಗೆ ತರಬೇತಿ, ಒತ್ತಡಗಾಯ ನಿರ್ವಹಣೆ, ಸಹಾಯಕ ಸಾಧನಗಳ ಬಳಕೆಯ ಮಾರ್ಗದರ್ಶನ ಹಾಗೂ ಸಮಾಜದಲ್ಲಿ ಸಮಾನ ಭಾಗವಹಿಸುವಿಕೆಗೆ ಪ್ರೋತ್ಸಾಹ ನೀಡಲಾಗುತ್ತದೆ. ಶಿಕ್ಷಣ, ಉದ್ಯೋಗ, ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಸ್ವಾವಲಂಬಿ ಬದುಕಿನತ್ತ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರನ್ನು ಬೆಂಬಲಿಸುವ ಕಾರ್ಯವನ್ನು ಸಮುದಾಯದ ಸಹಭಾಗಿತ್ವದೊಂದಿಗೆ ಮುಂದುವರಿಸಲಾಗುತ್ತದೆ.

## ಸೇವಾಭಾರತಿ ತಂಡದಿಂದ ಸಮಾಜ ಸೇವಕರಾದ ಶ್ರೀ ಕಿರಣ್ ಚಂದ್ರ ಡಿ ಪುಷ್ಪಗಿರಿ ಭೇಟಿ



**ಬೆಂಗಳೂರು (ಜುಲೈ 24):** ಸಮಾಜ ಸೇವೆ ಹಾಗೂ ಮಾನವೀಯ ಮೌಲ್ಯಗಳ ಪರವಾಗಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿರುವ ಸಮಾಜ ಸೇವಕರಾದ ಶ್ರೀ ಕಿರಣ್ ಚಂದ್ರ ಡಿ. ಪುಷ್ಪಗಿರಿ ಹಾಗೂ ಅವರ ಕುಟುಂಬಸ್ಥರನ್ನು ಸೇವಾಭಾರತಿ ತಂಡವು ಜುಲೈ 24ರಂದು ಭೇಟಿ ಮಾಡಿ, ಸೇವಾಭಾರತಿಯ ವಿವಿಧ ಸೇವಾ ಚಟುವಟಿಕೆಗಳ ಕುರಿತು ಮಾಹಿತಿ ನೀಡಲಾಯಿತು.

ಈ ಸೇವಾ ಕಾರ್ಯಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ವಿಸ್ತರಿಸಲು ಅವರ ಸಹಕಾರ ಮತ್ತು ಬೆಂಬಲವನ್ನು ಕೋರಲಾಯಿತು. ಈ ಸಂದರ್ಭದಲ್ಲಿ ಶ್ರೀ ಕಿರಣ್ ಚಂದ್ರ ಡಿ. ಪುಷ್ಪಗಿರಿ ಅವರು ಸೇವಾಭಾರತಿಯ ಸೇವಾ ಕಾರ್ಯಗಳಿಗಾಗಿ ₹40,000 ದೇಣಿಗೆಯನ್ನು ನೀಡಿದರು. ಅಲ್ಲದೆ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಸಬಲೀಕರಣ ಮತ್ತು ಪುನಶ್ಚೇತನ ಕಾರ್ಯಗಳಿಗೆ ತಮ್ಮ ಸಂಪೂರ್ಣ ಬೆಂಬಲ ಹಾಗೂ ನಿರಂತರ ಸಹಕಾರವನ್ನು ನೀಡುವುದಾಗಿ ಭರವಸೆ ವ್ಯಕ್ತಪಡಿಸಿದರು.ಶ್ರೀಯುತರು ಸೇವಾಭಾರತಿ ಅಧ್ಯಕ್ಷರಾದ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಅವರ ನಿಸ್ವಾರ್ಥ ಸೇವೆಯನ್ನು ಹಾಗೂ ಸೇವಾಭಾರತಿಯ ಸಮಾಜಮುಖಿ ಕಾರ್ಯಗಳನ್ನು ಹೃತ್ಪೂರ್ವಕವಾಗಿ ಪ್ರಶಂಸಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಸೇವಾಭಾರತಿಯ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ. ಅವರು ಉಪಸ್ಥಿತರಿದ್ದರು

## ಸೇವಾಧಾಮದಲ್ಲಿ ಹುಟ್ಟುಹಬ್ಬ ಆಚರಣೆ



ಶ್ರೀ ರಾಮಚಂದ್ರ ಗೌಡ ಕೆ ಕಾನರ್ಪ ಹಾಗೂ ಅವರ ಕುಟುಂಬಸ್ಥರು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಜುಲೈ 18 ರಂದು ಭೇಟಿ ನೀಡಿ ಅವರ ಪುತ್ರಿ ಶಾರ್ವಿ ರವರ 1 ನೇ ವರ್ಷದ ಹುಟ್ಟುಹಬ್ಬವನ್ನು ಕೇಂದ್ರದಲ್ಲಿ ಸನಿವಾಸಿಗಳಿಗೆ ಮತ್ತು ಆರೈಕೆದಾರರಿಗೆ ಒಂದು ಹೊತ್ತಿನ ಊಟಕ್ಕೆ 3000/- ದೇಣಿಗೆಯನ್ನು ನೀಡುವುದರೊಂದಿಗೆ ಸಮಾಜಕ್ಕೆ ಮಾದರಿಯಾಗುವಂತೆ ಆಚರಿಸಿಕೊಂಡರು. ಬೇಬಿ. ಶಾರ್ವಿ ಗೌಡ ಇವರಿಗೆ ಸಂಸ್ಥೆಯ ಪರವಾಗಿ ಶುಭಹಾರೈಸಲಾಯಿತು. ಈ ಸಂದರ್ಭದಲ್ಲಿ ಸೇವಾಧಾಮದ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

## ಮುಂಬೈಯ ಶ್ರೀಮತಿ ರೇಷ್ಮಾ ವೈಭವ್ ರಾವ್ ರವರಿಂದ ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ದೇಣಿಗೆ




ಅಜ್ಜೋಳಿಗೆ ಕುಟುಂಬಸ್ಥರಾದ ಮುಂಬೈಯ ಶ್ರೀಮತಿ ರೇಷ್ಮಾ ವೈಭವ್ ರಾವ್ ರವರ ಕುಟುಂಬಸ್ಥರು ಕನ್ಯಾಡಿ ಸೇವಾಭಾರತಿ ಇದರ ಪ್ರಧಾನ ಕಾರ್ಯಾಲಯ ಸೇವಾನಿಕೇತನಕ್ಕೆ ಭೇಟಿ ನೀಡಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 40,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ರವರು ಹಾಗೂ ಸಿಬ್ಬಂದಿ ವರ್ಗದವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಪ್ರಕರ್ಷ ಲೀಡರ್‌ಶಿಪ್ ಕಾನ್ಕ್ಲೇವ್‌ನಲ್ಲಿ ಸಂಸ್ಥೆಯ ಅಧ್ಯಕ್ಷರ ಭಾಗವಹಿಸುವಿಕೆ




**ಬೆಂಗಳೂರು (ಜುಲೈ 24):** ಸೇವಾ ಸಂಸ್ಥೆಗಳಿಗಾಗಿ ಸಾಮರ್ಥ್ಯ ವೃದ್ಧಿ ಹಾಗೂ ನಾಯಕತ್ವ ಅಭಿವೃದ್ಧಿಯನ್ನು ಉದ್ದೇಶವಾಗಿಟ್ಟುಕೊಂಡು ಬೆಂಗಳೂರಿನ ಪ್ರಕರ್ಷ ಅಕಾಡೆಮಿ ವತಿಯಿಂದ "Prakarsha Leadership Conclave for Non-Profits" ಕಾರ್ಯಕ್ರಮವನ್ನು ಜುಲೈ 24 ರಂದು ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ನಮ್ಮ ಸಂಸ್ಥೆಯ ಅಧ್ಯಕ್ಷರಾದ ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಅವರು ವಿಶೇಷ ಆಹ್ವಾನಿತರಾಗಿ ಭಾಗವಹಿಸಿದರು. "Journeys Behind Growth" ಎಂಬ ಪ್ಯಾನಲ್ ಚರ್ಚೆಯಲ್ಲಿ ಪ್ಯಾನೆಲ್ ಸದಸ್ಯರಾಗಿ ಭಾಗವಹಿಸಿ, ತಮ್ಮ ಸಂಸ್ಥೆಯ ಬೆಳವಣಿಗೆಯ ಪಯಣ, ಸಮಾಜಸೇವೆಯ ಅನುಭವಗಳು ಹಾಗೂ ಸಂಘಟನೆಯನ್ನು ಯಶಸ್ವಿಯಾಗಿ ಮುನ್ನಡೆಸುವ ಕುರಿತು ತಮ್ಮ ಅನುಭವಗಳನ್ನು ಹಂಚಿಕೊಂಡರು. ಪ್ರಕರ್ಷ ಅಕಾಡೆಮಿಯ ಈ ಸಮಾವೇಶವು ಸೇವಾ ಸಂಸ್ಥೆಗಳು ಪರಸ್ಪರ ಸಂಪರ್ಕ ಬೆಳೆಸಿಕೊಳ್ಳಲು, ಅನುಭವಗಳನ್ನು ಹಂಚಿಕೊಳ್ಳಲು ಹಾಗೂ ಒಟ್ಟಾಗಿ ಅಭಿವೃದ್ಧಿಯತ್ತ ಸಾಗಲು ಉತ್ತಮ ವೇದಿಕೆಯಾಗಿತ್ತು.ಕಾರ್ಯಕ್ರಮದಲ್ಲಿ ಒಟ್ಟು 88 ಸೇವಾ ಸಂಸ್ಥೆಗಳು ಭಾಗವಹಿಸಿದ್ದವು

## ಸೇವಾಕಾರ್ಯಗಳ ಹಿನ್ನೋಟ

**SEVABHARATHI**

Sevabharathi Achievements in Nutshell
Up to 31 May 2026
District Covered
(Dakshina Kannada, Udupi, Chikkamagalur, Shivamogga, Uttar Kannada, Kodagu)

| Services Provided - Sevadhama Program | Number |
|---|---|
| Identified People with Spinal Cord Injury | 833 |
| Rehabilitated People with Spinal Cord Injury (PwSCI) | 279 |
| Medical Camps Held (Belthangady, Puttur, Sullia, Ujire, Koppa, Moodbidri, Thumbe, Mangalore, Kundapura, Karkala , Mudigere, Kumta, Sirsi, Hassan, Sringeri, Madikeri, Tarikere and Udupi) | 31 |
| Wheelchairs Distributed | 438 |
| Calipers Provided | 64 |
| Walkers given | 90 |
| Home Accessibility like (Ramp, Toilets Provided) | 52 |
| Assistance for Self Employment | 140 |
| Medical Intervention | 326 |
| Surgical Assistance | 16 |
| Hospital Visited (Including PHC, CHC, THC ) | 163 |
| Panchayats Visited | 100 |
| Medical/Self-Care Kits Distributed | 1769 |
| Grocery kit distributed | 343 |
| Solar Inverter | 46 |
| BP/Diabetic Machines | 107 |
| Taluk Covered | 48 |
| **Services Provided - Arogyam Program** | **Number** |
| Blood Donation Camp Organized | 105 |
| Unit's collected | 11,399 |
| Ambulance services | 403 |
| **Services Provided - Sabalini Program** | **Number** |
| Tailoring Camp | 36 |
| Womens Empowered | 967 |

Sevadhama Premises provided Free by
Sri Mahaganapathy Seva Trust®, Southadka
Sevadhama Wound care and Rehabilitation center, Byndooru

### ಸೇವಾಧಾಮದ ಜುಲೈ ತಿಂಗಳ ಸೇವಾಕಾರ್ಯಗಳು

- ಸೆಲ್ಫ್ ಕೇರ್ ಕಿಟ್ ವಿತರಣೆ - 53
- ಮೆಡಿಕಲ್ ಕಿಟ್ ವಿತರಣೆ - 40
- ಹೊಸ ಗುರುತಿಸುವಿಕೆ - 04
- ರೆಟ್ರೊಫಿಟ್ಟೆಡ್ ಸ್ಕೂಟರ್ ವಿತರಣೆ - 01
- ಕೇಂದ್ರದಲ್ಲಿ ಪುನಶ್ಚೇತನ ಪಡೆದುಕೊಳ್ಳುತ್ತಿರುವ ಸನಿವಾಸಿಗಳು
  ಸೌತಡ್ಕ ಸೇವಾಧಾಮ - 10
  ಬೈಂದೂರು ಸೇವಾಧಾಮ - 04

## ಸೇವಾಸಂಗಮ

ಸೇವಾಸಂಗಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ
ಆನ್ಲೈನ್ ಕಾರ್ಯಾಗಾರ - 40 )

ಮುತ್ತೂಟ್ ಎಂ. ಜಾರ್ಜ್ ಫೌಂಡೇಶನ್‌ನ
ಸಮಾಜಸೇವಾ ಕಾರ್ಯಗಳು - ಅರ್ಜಿ ಸಲ್ಲಿಸುವ ವಿಧಾನ

ಸಂಪನ್ಮೂಲ ವ್ಯಕ್ತಿ



ಶ್ರೀ ಪ್ರಸಾದ್ ಕುಮಾರ್
ಮ್ಯಾನೇಜರ್ - ಸಿಎಸ್‌ಆರ್
ಮುತ್ತೂಟ್ ಫೈನಾನ್ಸ್, ಕರ್ನಾಟಕ

ದಿನಾಂಕ : 11/07/2026
ಸಮಯ : 4pm to 4:45pm
Live On : Google Meet
https://meet.google.com/ttr-aoxo-mfc

ಸೇವಾಭಾರತಿ(ರಿ.), ಕನ್ಯಾಡಿ -II
9945491241
www.sevaabharathi.org




ಜುಲೈ ತಿಂಗಳ ಸೇವಾಸಂಗಮ ಆನ್ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಮುತ್ತೂಟ್ ಫೈನಾನ್ಸ್ ನ ಸಿಎಸ್‌ಆರ್ ಮ್ಯಾನೇಜರ್ ಶ್ರೀ ಪ್ರಸಾದ್ ಕುಮಾರ್ ರವರು ಮುತ್ತೂಟ್ ಎಂ. ಜಾರ್ಜ್ ಫೌಂಡೇಶನ್‌ನ ಸಮಾಜಸೇವಾ ಕಾರ್ಯಗಳು ಹಾಗೂ ಅರ್ಜಿ ಸಲ್ಲಿಸುವ ವಿಧಾನದ ಬಗ್ಗೆ ಮಾಹಿತಿ ನೀಡಿದರು ಕಾರ್ಯಾಗಾರದಲ್ಲಿ ಒಟ್ಟು 65 ಮಂದಿ ಭಾಗವಹಿಸಿದ್ದರು.

## ಸೇವಾನಿಧಿ ದಾನಿಗಳು

- ಶ್ರೀ ರಾಜಾರಾಮ್ ಕಾರಂತ್ , ಬೆಂಗಳೂರು
- ಶ್ರೀ ಸುನಿಲ್ ಪಿ. ಎನ್, ಕನ್ಯಾಡಿ
- ಶ್ರೀ ಯು ರಮೇಶ್ ಪ್ರಭು, ಉಜಿರೆ
- ಶ್ರೀಮತಿ ಸವಿತಾ ಎಮ್ ರಾವ್, ಕನ್ಯಾಡಿ
- ಶ್ರೀಮತಿ ತೇಜವತಿ, ಕನ್ಯಾಡಿ
- ಶ್ರೀ ಕೌಶಿಕ್ ಎಸ್ ರಾವ್, ಕನ್ಯಾಡಿ
- ಶ್ರೀ ಕೆ ಪುರಂದರ ರಾವ್, ನಾರ್ಯ
- ಶ್ರೀ ಕೃಷ್ಣಮೂರ್ತಿ ರಾವ್, ಕನ್ಯಾಡಿ
- ಶ್ರೀಮತಿ ಜಯಂತಿ ಪುರಂದರ, ನಾರ್ಯ
- ಶ್ರೀ ರಂಜಿತ್ ಕುಮಾರ್, ಪಟ್ರಮೆ
- ಶ್ರೀ ಅಶೋಕ್, ಕೊಪ್ಪಳ
- ಶ್ರೀ ಗಣೇಶ್ ಭಟ್, ಉಜಿರೆ
- ಶ್ರೀ ಡಿ ವಸಂತ ಭಟ್, ಧರ್ಮಸ್ಥಳ
- ಶ್ರೀ ಡಿ ಸುಬ್ರಮಣ್ಯ ಭಟ್, ಧರ್ಮಸ್ಥಳ
- ಶ್ರೀ ನಿತಿನ್, ಉಜಿರೆ
- ಶ್ರೀ ಕೆ ವಿನಾಯಕ ರಾವ್, ಕನ್ಯಾಡಿ
- ಶ್ರೀ ಕೆ ಯೋಗೀಶ್ ಪೈ, ಮಣಿಪಾಲ
- ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
- ಶ್ರೀಮತಿ ದಿವ್ಯಾ ಪುರಂದರ, ಬೆಂಗಳೂರು
- ಶ್ರೀ ಬಿ ರಾಮದಾಸ್ ಭಂಡಾರ್ಕರ್, ಉಜಿರೆ
- ಶ್ರೀ ದಿವಾಕರ್ ರಾವ್, ಕನ್ಯಾಡಿ
- ಶ್ರೀ ಗಣೇಶ್ ಭಟ್, ಉಜಿರೆ
- ಶ್ರೀ ಕಾರ್ತಿಕ್ ಕೆ, ಧರ್ಮಸ್ಥಳ
- ಶ್ರೀ ಬಾಲಕೃಷ್ಣ ರಾವ್ ಕೆ, ಕನ್ಯಾಡಿ
- ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
- ಡಾ ರಾಮಕೃಷ್ಣ ಭಟ್ ಜಿ ಎನ್, ಕನ್ಯಾಡಿ
- ಶ್ರೀ ಮಧುಸೂಧನ್, ಉಜಿರೆ
- ಶ್ರೀ ಸುನಿಲ್ ಕುಮಾರ್ ಜೈನ್, ದೊಂಡೋಲೆ
- ಶ್ರೀ ಕೆ ರಮೇಶ್ ಪೂಜಾರಿ, ಕನ್ಯಾಡಿ
- ಶ್ರೀ ಅಣ್ಣು ದೇವಾಡಿಗ, ಧರ್ಮಸ್ಥಳ
- ಶ್ರೀ ರಕ್ಷಿತ್ ಎಸ್ ಕುಲಾಲ್, ಬಡಗಕಾರಂದೂರು
- ಶ್ರೀಮತಿ ಮೀನಾಕ್ಷಿ ಜಿ ಭಟ್, ಜೋಡುಸ್ಥಾನ
- ಶ್ರೀಮತಿ ಸ್ಮಿತಾ ವೈ ಬಿ
- ಶ್ರೀ ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
- ಶ್ರೀ ಪುರುಷೋತ್ತಮ್ ಡಿ ಎ, ಧರ್ಮಸ್ಥಳ
- ಶ್ರೀಮತಿ ಸವಿತಾ ಎಮ್ ರಾವ್, ಕನ್ಯಾಡಿ
- ಶ್ರೀ ಸಂತೋಷ್, ಕೊಕ್ಕಡ
- ಶ್ರೀ ಪುಷ್ಪರಾಜ್, ಅಡ್ಯಾರ್
- ಬೇಬಿ ವಿಹಾನ ಎಮ್ ಎಮ್, ನಿಡ್ಲೆ
- ಶ್ರೀ ದೀಕ್ಷಿತ್ ಎಮ್, ನಿಡ್ಲೆ
- ಶ್ರೀ ಮೋಹನ್ ಕುಮಾರ್, ಮಂಗಳೂರು
- ಶ್ರೀ ಜಯಾನಂದ ಎಮ್, ಕನ್ಯಾಡಿ
- ಶ್ರೀ ರಜತ್ ಕುಮಾರ್ ಜೆ ಡಿ, ವೇಣೂರು
- ಶ್ರೀ ಬಿ ಪುರಂದರ, ನಾರ್ಯ
- ಶ್ರೀ ಜಿ ಪುಟ್ಟಸ್ವಾಮಿ, ಉಜಿರೆ
- ಬೇಬಿ ಶ್ರೀ ಬಿಲ್ವಾನಿ, ಉಜಿರೆ
- ಶ್ರೀ ವಿಘ್ನೇಶ್ ಕುಡ್ವ, ಉಜಿರೆ
- ಶ್ರೀ ಪ್ರಜ್ವಲ್ ಜೆ, ದೊಂಡೋಲೆ
- ಶ್ರೀಮತಿ ಬಬಿತಾ, ಕನ್ಯಾಡಿ
- ಶ್ರೀ ವಿಜಯಕುಮಾರ್, ಬೆಂಗಳೂರು

## ಮಹನೀಯ ದಾನಿಗಳು

- ಶ್ರೀ ವಿಠ್ಠಲ್ ಎಂ ಕುಂಗೂರ್, ಬೆಂಗಳೂರು
- ಶ್ರೀ ಆರ್ ವಾಸುದೇವ್ ಭಟ್, ಮೈಸೂರು
- ಶ್ರೀ ಜಯ ಪೂಜಾರಿ, ಮಲ್ಪೆ
- ಶ್ರೀ ಹರಿದಾಸ್ ನಾಯಕ್, ಉಡುಪಿ
- ಬೇಬಿ ಶರಣ್ಯ ಎಸ್ ಎಚ್, ಮೂಡಬಿದ್ರಿ
- ಶ್ರೀ  ಎಸ್ ಪುರುಷೋತ್ತಮ್ ನಾಯಕ್, ಉಡುಪಿ
- ಶ್ರೀ ಕೆ ಸುಂದರ್ ಶೆಟ್ಟಿ, ಉಡುಪಿ
- ಶ್ರೀ ವಿಜಯಕುಮಾರ್ , ಬೆಂಗಳೂರು
- ಶ್ರೀ ಎಚ್ ಶುಭಚಂದ್ರ ಹತ್ವಾರ್, ಉಡುಪಿ
- ಶ್ರೀ ಸತ್ಯನಾರಾಯಣ ರಾವ್, ನಿಡ್ಲೆ
- ಶ್ರೀಮತಿ ಪೂರ್ಣಿಮಾ ಕೆ ಭಟ್, ಪುತ್ತೂರು
- ಶ್ರೀ ಮುರಳೀಧರ ಎಸ್, ಮೂಡಬಿದ್ರಿ
- ಡಾ ಅಜಯ್ ಉದ್ಯಾವರ್, ಉಡುಪಿ
- ಶ್ರೀ ಪನ್ನಗ ಶೆಟ್ಟಿ, ಬೈಂದೂರು
- ಶ್ರೀ ರಾಘವೇಂದ್ರ ಎಮ್ ಸಾಮಗ, ಬ್ರಹ್ಮಾವರ
- ಶ್ರೀ ಕೆ ಕೃಷ್ಣ ಭಟ್, ಕೊಕ್ಕಡ
- ಶ್ರೀ ಕೆ ಉಮೇಶ್ ಶೆಣೈ, ಉಡುಪಿ
- ಶ್ರೀ ಪುರುಷೋತ್ತಮ್, ಕನ್ಯಾಡಿ
- ಶ್ರೀ ಎಸ್ ಎಮ್ ನಾಯಕ್, ಉಡುಪಿ
- ಶ್ರೀ ಜಿ ರಾಘವೇಂದ್ರ ತೇಜಾ, ತೆಲಂಗಾಣ
- ಶ್ರೀ ಚಿದಂಬರ ಬಂಡಿಗೇಡಿ, ಉಡುಪಿ
- ಶ್ರೀಮತಿ ವಂದನಾ ರಾವ್, ಜೋಡುಸ್ಥಾನ
- ಶ್ರೀ ಎ ಸತೀಶ್ ನಾಯಕ್, ಉಡುಪಿ
- ಶ್ರೀ ಚೇತನ್ ಎ, ಕಲ್ಮಂಜ
- ಮಾಸ್ಟರ್ ಜೀವನ್ ಪಿ ಆರ್, ಧರ್ಮಸ್ಥಳ
- ಶ್ರೀ ಕೆ ವಿವೇಕ್ ರಾವ್, ಬೆಂಗಳೂರು
- ಶ್ರೀ ಭಾಸ್ಕರ್ ತಂತ್ರಿ, ಉಡುಪಿ
- ಶ್ರೀ ರಾಮಚಂದ್ರ ಗೌಡ ಕೆ, ಕಡಿರುದ್ಯಾವರ
- ಶ್ರೀ ಕೆ ವಿನಾಯಕ ರಾವ್, ಕನ್ಯಾಡಿ
- ಶ್ರೀ ಬಿ ಕೃಷ್ಣ ಕಾಮತ್, ಉಡುಪಿ
- ಶ್ರೀ ಕಿರಣಚಂದ್ರ ಡಿ ಪುಷ್ಪಗಿರಿ, ಉರುವಾಲು
- ಶ್ರೀ ಹರಿಕಿರಣ್ ಯು ಆರ್ ಮತ್ತು
- ಶ್ರೀಮತಿ ಅಪೂರ್ವ ಪಿ ವಿ, ಬದಿಯಡ್ಕ
- ಶ್ರೀ ಸಚಿನ್ ಕುಮಾರ್, ಬಡಗಕಜೆಕಾರ್
- ಶ್ರೀ ಪದ್ಮಾಕರ್ ಪ್ರಭು, ಉಡುಪಿ
- ಮಾಸ್ಟರ್ ಆರ್ಯನ್ ಅಭಿಷೇಕ್, ಬೆಂಗಳೂರು

## ಸಂಘ ಸಂಸ್ಥೆಗಳು

- ದಿ ಮಣಿ ಅಂಡ್ ಮಿನೂ ಚಾರಿಟೇಬಲ್ ಟ್ರಸ್ಟ್, ಮುಂಬೈ
- ರಿಟೈರ್ಡ್ ಎಲ್.ಐ ಸಿ ಎಂಪ್ಲಾಯೀಸ್ ಅಸೋಸಿಯೇಷನ್, ಉಡುಪಿ
- ಭಾರತ್ ವಿಕಾಸ್ ಪರಿಷದ್, ಉಡುಪಿ

## ವಸ್ತು ರೂಪದಲ್ಲಿ ದೇಣಿಗೆ

- ಉಜಿರೆ ಹವ್ಯಕ ವಲಯ, ಉಜಿರೆ
- ಕು. ಜಾನವಿಕ, ಉಪ್ಪುಂದ
- ಶ್ರೀಮತಿ ಮೀನಾಕ್ಷಿ ಜಿ ಭಟ್, ಜೋಡುಸ್ಥಾನ
- ಅಮೃತ ಶಿಶು ನಿವಾಸ, ಬೆಂಗಳೂರು

# ಸೇವಾಧಾಮ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ಧನಸಹಾಯ ನೀಡುವಂತೆ ಮನವಿ





**2025ರಲ್ಲಿ ನೆಲ ಮಹಡಿಯ ಆಡಳಿತ ಕಚೇರಿ ಕಾರ್ಯಾರಂಭಗೊಂಡಿದ್ದು, ಪ್ರಸ್ತುತ ಅಲ್ಲಿಂದಲೇ ಸಂಸ್ಥೆಯ ಸೇವಾ ಚಟುವಟಿಕೆಗಳು ನಡೆಯುತ್ತಿವೆ. ಮೊದಲನೇ ಮಹಡಿಯ ಪ್ಲಾಸ್ಟರಿಂಗ್, ವಿದ್ಯುತ್ ಹಾಗೂ ಇತರೆ ಪ್ರಮುಖ ಕಾಮಗಾರಿಗಳು ಪೂರ್ಣಗೊಂಡಿದ್ದು, ಗ್ರಾನೈಟ್ ಮತ್ತು ಟೈಲ್ಸ್ ಅಳವಡಿಕೆ ಅಂತಿಮ ಹಂತದಲ್ಲಿದೆ. ಎರಡನೇ ಮಹಡಿಯ ಸ್ಲ್ಯಾಬ್ ಪೂರ್ಣಗೊಂಡಿದ್ದು, ಗೋಡೆ ಕಾಮಗಾರಿ ಪ್ರಗತಿಯಲ್ಲಿದೆ. 2026ರ ಆಗಸ್ಟ್ ಮೂರನೇ ವಾರದಲ್ಲಿ ಮೊದಲನೇ ಮಹಡಿಯ ಪೂಜೆ ಹಾಗೂ ನಾಲ್ಕನೇ ವಾರದಲ್ಲಿ ದಾನಿಗಳು ನಿಗದಿಪಡಿಸಿದ ದಿನದಂದು ಪ್ರವೇಶ ಕಾರ್ಯಕ್ರಮವನ್ನು ನಡೆಸಲು ಯೋಜಿಸಲಾಗಿದೆ.**

**ನಿರ್ಮಾಣ ಹಂತಗಳು:**

- ✅ **2024 – ಅಡಿಪಾಯ ಪೂರ್ಣ**
- ✅ **2025 – ನೆಲಮಾಳಿಗೆ ನಿರ್ಮಾಣ ಪೂರ್ಣ**
- ✅ **2025 – ನೆಲ ಮಹಡಿ ಹಾಗೂ ಆಡಳಿತ ಕಚೇರಿ ಕಾರ್ಯಾರಂಭ**
- 🚧 **2026 – ಮೊದಲನೇ ಮಹಡಿ ಅಂತಿಮ ಹಂತ**
- 🚧 **2026 – ಎರಡನೇ ಮಹಡಿ ಪ್ರಗತಿಯಲ್ಲಿದೆ**

**ಇದುವರೆಗೆ ₹2,31,98,965/- ವೆಚ್ಚವಾಗಿದ್ದು, ಉಳಿದ ಮೂರು ಮಹಡಿಗಳ ನಿರ್ಮಾಣಕ್ಕೆ ಇನ್ನಷ್ಟು ಆರ್ಥಿಕ ನೆರವಿನ ಅಗತ್ಯವಿದೆ.**

ಸೇವಾಭಾರತಿ ಸಂಸ್ಥೆಯು ಕಳೆದ 21 ವರ್ಷಗಳಲ್ಲಿ ಸಾಮಾಜಿಕವಾಗಿ ಅನೇಕ ಕ್ಷೇತ್ರಗಳಲ್ಲಿ ಸೇವಾ ಕಾರ್ಯಗಳನ್ನು ಮಾಡುತ್ತ ಬರುತ್ತಿದ್ದು, ಸಬಲಿನಿ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಉಚಿತ ಟೈಲರಿಂಗ್ ತರಬೇತಿಗಳು, ಆರೋಗ್ಯಮ್ ಯೋಜನೆಯಡಿ ಆಂಬುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸೇವಾಧಾಮ ಯೋಜನೆ ಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ, ಈ ಮೂರು ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದೆ.

ನಮ್ಮ ಸಂಸ್ಥೆಯ ಸಮಾಜಮುಖಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ಯಾಡಿಯಲ್ಲಿ 2023ನೇ ವರ್ಷದಲ್ಲಿ ಸರ್ಕಾರವು ಒಟ್ಟು 10 ಸೆಂಟ್ಸ್ ಜಮೀನನ್ನು ನಮ್ಮ ಸಂಸ್ಥೆಯ ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರುಗೊಳಿಸಿದೆ. 2025 ರಲ್ಲಿ ಸೇವಾಭಾರತಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರದ ಉದ್ದೇಶಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಲ್ಲದೆ ಧನಸಹಾಯ ನೀಡುವಂತೆ ಬೇರೆ ಬೇರೆ ಸಂಸ್ಥೆಗಳಿಗೆ ಮನವಿಯನ್ನೂ ಮಾಡಿದ್ದೇವೆ. ಈ ಮನವಿಗೆ ಸ್ಪಂದಿಸಿ ನೆಲಮಹಡಿಗೆ Mangalore Refinery and Petrochemicals Limited (MRPL) ನಿಂದ ರೂ. 42 ಲಕ್ಷ ಮಂಜೂರಾಗಿ ಅದರಲ್ಲಿ ನೆಲಮಹಡಿಯ ಕಟ್ಟಡದ ನಿರ್ಮಾಣ ಸಂಪೂರ್ಣವಾಗಿ ಪೂರ್ಣಗೊಂಡು ಉದ್ಘಾಟನೆ ಆಗಿದೆ., ಹಾಗೂ NMPA CSR ಅನುದಾನದ ಅಡಿಯಲ್ಲಿ ಮೊದಲ ಮಹಡಿಯ ಪಿಲ್ಲರ್ ಹಾಗೂ ಸ್ಲ್ಯಾಬ್ ಕಾಮಗಾರಿ ಸಂಪೂರ್ಣವಾಗಿ ಪೂರ್ಣಗೊಂಡಿದ್ದು. LIC ಯ ರೂ. 40 ಲಕ್ಷ ಮಂಜೂರುಗೊಂಡಿರುವ ಕಾರಣ ಅತೀ ಶೀಘ್ರದಲ್ಲಿ ಈ ಮಹಡಿ ನಿರ್ಮಾಣಗೊಳ್ಳಲಿದೆ. ಪ್ರಸ್ತುತ ಇದೀಗ, ಎರಡನೇ ಮಹಡಿಯ ಕಾಮಗಾರಿ ಪ್ರಾರಂಭವಾಗಿದೆ.

ಬೇರೆ ಬೇರೆ CSR, ದಾನಿಗಳಿಗೆ, ಸಂಘ ಸಂಸ್ಥೆಗಳಿಗೆ ಸಹಕಾರವನ್ನು ಅಪೇಕ್ಷಿಸುತಿದ್ದೇವೆ. ನಿಯೋಜಿತ ಕಟ್ಟಡದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಉತ್ತಮ ಪುನಶ್ಚೇತನಕಾಗಿ ಫಿಸಿಯೋಥೆರಪಿ ವಾರ್ಡ್ ಕೇಂದ್ರಾಧಾರಿತ ಸೇವೆಗಾಗಿ ವಸತಿ (12 ಮಂದಿ ಮತ್ತು ಆರೈಕೆದಾರರಿಗೆ ವಸತಿ ವ್ಯವಸ್ಥೆ), ಅಡುಗೆ ಮತ್ತು ಊಟದ ಹಾಲ್ ದಿವ್ಯಾಂಗರಿಗೆ ಅನೇಕ ರೀತಿಯ ತರಬೇತಿ ವೈದ್ಯಕೀಯ ತಪಾಸಣೆಗಾಗಿ ಬಹು ಉದ್ದೇಶಿತ ಸಭಾಂಗಣ ಮತ್ತು ಪ್ರಧಾನ ಕಚೇರಿ ಹೊಂದಿರುವ ಈ ಕಟ್ಟಡ ಸಂಪೂರ್ಣ ದಿವ್ಯಾಂಗ ಸ್ನೇಹಿಯಾಗಿ ನಿರ್ಮಾಣವಾಗಲಿದೆ. ಈ ಕಟ್ಟಡ ಪೂರ್ತಿಯಾಗಿ ನಿರ್ಮಾಣಗೊಂಡಾಗ ಕರ್ನಾಟಕದಾದ್ಯಂತ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಉತ್ತಮ ಸೇವೆಯನ್ನು ನೀಡುವ ಪುನಶ್ಚೇತನ ಕೇಂದ್ರವಾಗುತ್ತದೆ. ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು, ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದ್ದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿರುವುದಿಲ್ಲ. ಆದಕಾರಣ ನಮ್ಮ ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿ-ಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

## BANK ACCOUNT DETAILS

SEVABHARATHI REGD

Scan and Pay also

| | | |
|---|---|---|
| A/c Holder | - | M/s. Sevabharathi(R) |
| A/c No | - | 120000400920 |
| Account Type | - | Current Account, Canara Bank Dharmasthala Branch |
| IFS Code | - | CNRB0010246 |

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

**ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.**



**ಶ್ರೀ ಕೆ ವಿನಾಯಕ ರಾವ್,**
ಕನ್ಯಾಡಿ -II



**ಶ್ರೀ ದಿನಕರ್ ಶೆಟ್ಟಿ ,**
ಹೆರ್ಗ



**ಶ್ರೀ ಗಿರೀಶ್ ಬಿ.ಕೆ ,**
ಬಂದಾರು



**ಶ್ರೀ ಹರಿಕಿರಣ್ ಯು ಆರ್**
**ಮತ್ತು ಶ್ರೀಮತಿ ಅಪೂರ್ವ ಪಿ ವಿ**



**ಕು| ಜಾನವಿಕ,**
ಉಪ್ಪುಂದ



**ಶ್ರೀ ಸುಧಾಕರ ಮಂಜು**
**ಪೂಜಾರಿ,** ಶಿರಸಿ



**ಶ್ರೀ ಕಿರಣ್ ಚಂದ್ರ ಡಿ**
**ಪುಷ್ಪಗಿರಿ,** ಉರುವಾಲು



**ಶ್ರೀ ಕುಂಞಪ್ಪ ಗೌಡ ಕೆ,**
ಕೊಕ್ಕಡ



**ಬೇಬಿ| ಲಿಕ್ಷಿತಾ ಆರ್ ಕೆ,**
ಬೆಳ್ತಂಗಡಿ



**ಶ್ರೀಮತಿ ಮಮತಾ**
**ಎನ್ ಹೊಳ್ಳ ,** ಉಜಿರೆ



**ಶ್ರೀ ಮಂಜುನಾಥ್ ಮತ್ತು**
**ಶ್ರೀಮತಿ ನೀತಾ ರಾವ್,** ಕಟೀಲು



**ಶ್ರೀ ರಕ್ಷಿತ್ ಗೌಡ,**
ಕಾಣಾವೂ



**ಶ್ರೀ ಸಚಿನ್ ಪೂಜಾರಿ**
ಬಂಟ್ವಾಳ



**ಶ್ರೀ ರಾಮಚಂದ್ರ**
**ಗೌಡ ಕೆ,** ಕೊಕ್ಕಡ



**ಶ್ರೀ ಕೆ. ವಿವೇಕ್ ರಾವ್**
ಬೆಂಗಳೂರು



**ಶ್ರೀ ನಿತಿನ್ ಗೌಡ,**
ಉಜಿರೆ



**ಮಾಸ್ಟರ್| ಪ್ರನೀಲ್ ಎ**



**ಮಾಸ್ಟರ್ ಆರ್ಯನ್**
**ಅಭಿಷೇಕ್ ,** ಬೆಂಗಳೂರು



**ಮಾಸ್ಟರ್| ಜೀವನ್**
**ಪಿ.ಆರ್,** ಧರ್ಮಸ್ಥಳ

## ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

**ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.**


**ಶ್ರೀ ಜಯರಾಜ್**
ಕನ್ಯಾಡಿ- II


**ಶ್ರೀಮತಿ ಮೀನಾಕ್ಷಿ ಜಿ ಭಟ್**, ಜೊಡುಸ್ಥಾನ


**ಶ್ರೀ ಮುಕುಂದ ದೇವದರ್**,
ನಿಡ್ಲೆ


**ಡಾ| ಭಾರತಿ ಜಿ ಕೆ**,
ಉಜಿರೆ


**ಶ್ರೀ ಉದಯಶಂಕರ್ ಕೆ**,
ಅರಸಿನಮಕ್ಕಿ

## ಬೈಂದೂರು ಮತ್ತು ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ಜುಲೈ ತಿಂಗಳಲ್ಲಿ ಡಿಸ್ಚಾರ್ಜ್ ಆದವರು



**ಶ್ರೀ ರಾಮಣ್ಣ ಪುತ್ತೂರು**



**ಶ್ರೀ ಶೇಖರಪ್ಪ , ಚಿಕ್ಕಮಗಳೂರು**



**ಶ್ರೀ ಮೊಹಮ್ಮದ್ ಶೀರಾಜ್ , ಬೇಲೂರು**



**ಶ್ರೀ ಆನಂದ ಗೌಡ, ಸುಳ್ಯ**

## ಮೂಡಬಿದ್ರೆಯ ಶ್ರೀ ಮುರಳೀಧರ ಇವರಿಂದ ಗಾಲಿಕುರ್ಚಿ ಕೊಡುಗೆ




**ಸೌತಡ್ಕ (ಜುಲೈ 17):** ಮೂಡಬಿದ್ರೆಯ ಶ್ರೀ ಮುರಳೀಧರ ಹಾಗೂ ಅವರ ಕುಟುಂಬಸ್ಥರು ಜುಲೈ 17 ರಂದು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೇಟಿ ನೀಡಿ ಸೇವಾಧಾಮದಲ್ಲಿ ಪುನಶ್ಚೇತನವನ್ನು ಪಡೆದುಕೊಳ್ಳುತ್ತಿರುವ ಪುತ್ತೂರಿನ ರಾಮಣ್ಣ ರವರಿಗೆ ಗಾಲಿಕುರ್ಚಿಯನ್ನು ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಬಾಲಕೃಷ್ಣ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ನಿಮಗಿದು ತಿಳಿದಿರಲಿ

### ಬೆನ್ನುಹುರಿಯ ಉದ್ದ ಮತ್ತು ದಪ್ಪ

ಸಾಮಾನ್ಯವಾಗಿ ವಯಸ್ಕರಲ್ಲಿ ಬೆನ್ನುಹುರಿಯ ಉದ್ದವು ಸುಮಾರು 43 ರಿಂದ 45 ಸೆಂಟಿಮೀಟರ್ ಇರುತ್ತದೆ. ಇದರ ದಪ್ಪವು ಸುಮಾರು 1 ರಿಂದ 1.05 ಸೆಂಟಿಮೀಟರ್, ಅಂದರೆ ನಮ್ಮ ತೋರುಬೆರಳಿನ ದಪ್ಪದಷ್ಟಿರುತ್ತದೆ. ಗಾತ್ರದಲ್ಲಿ ಚಿಕ್ಕದಾಗಿದ್ದರೂ ಇದರೊಳಗೆ ಲಕ್ಷಾಂತರ ನರತಂತುಗಳು ಇರುತ್ತವೆ. ಇವು ಮೆದುಳು ಮತ್ತು ದೇಹದ ವಿವಿಧ ಭಾಗಗಳ ನಡುವೆ ಸಂದೇಶಗಳನ್ನು ವೇಗವಾಗಿ ರವಾನಿಸುವ ಕಾರ್ಯವನ್ನು ನಿರ್ವಹಿಸುತ್ತವೆ. ಆದ್ದರಿಂದ ಬೆನ್ನುಹುರಿಯು ದೇಹದ ಚಲನೆ, ಸಂವೇದನೆ ಮತ್ತು ಪ್ರತಿಫಲನ ಕ್ರಿಯೆಗಳಿಗೆ ಅತ್ಯಂತ ಪ್ರಮುಖ ಅಂಗವಾಗಿದೆ.

## ನಮ್ಮ ಯೋಜನೆಗಳು

- **ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.
- **ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ
- **ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ,
- **ಸೇವಾಪಥ** : ಮಾಸಿಕ ಈ-ನ್ಯೂಸ್ ಲೆಟರ್ .
- **ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.
- **ಆರೋಗ್ಯ ಬಿಂದು** : ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್ ಕೇರ್ & ಮೆಡಿಕಲ್ ಕಿಟ್ ಗಳು

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

- ರೂ. 2000/ - ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್ ಗಳಿಗಾಗಿ ಸಹಕಾರ.
- ರೂ. 3,000/ - ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ
- ರೂ. 4,500/ - ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ
- ರೂ. 10,000/ - ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ
- ರೂ. 10,000/- ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು
- ರೂ. 15,000/ - ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ
- ರೂ. 18,000/ - ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ

## DONATE & JOIN US IN OUR MISSION

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

## Support us for constructions of Rehabilitation Centre

SEVABHARATHI REGD
237887292400920@cnrb

A/c Holder - M/s. Sevabharathi(R)
A/c No - 120000400920
Account Type - Current Account Canara Bank Dharmasthala Branch
IFS Code - CNRB0010246

# ಗಾಲಿಕುರ್ಚಿ ಅವರ ವಿಧಿಯಾದರೂ... ಸ್ವಾವಲಂಬನೆ ಅವರ ಆಯ್ಕೆಯಾಯಿತು – ಮಂಗಳೂರಿನ ಶ್ರೀ ಸುಭಾಷ್ ಅವರ ಸ್ಫೂರ್ತಿದಾಯಕ ಪಯಣ




ಮಂಗಳೂರಿನ ಕೊಟ್ಟಾರಚೌಕಿಯ ನಿವಾಸಿಯಾದ ಶ್ರೀ ಸುಭಾಷ್, 1981ರ ಏಪ್ರಿಲ್ 28ರಂದು ದಿವಂಗತ ಕೆ. ಅಯ್ಯಪ್ಪ ಹಾಗೂ ದಿವಂಗತ ಕೆ. ಸುಭದ್ರಾ ದಂಪತಿಗಳ ಮಗನಾಗಿ ಜನಿಸಿದರು. ಬಾಲ್ಯದಿಂದಲೇ ಸರಳ ಜೀವನವನ್ನು ನಡೆಸುತ್ತಿದ್ದ ಅವರು, ಕಾವೂರಿನ ಗಾಂಧಿನಗರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 9ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದರು. ಕುಟುಂಬದ ಪರಿಸ್ಥಿತಿಯ ಕಾರಣದಿಂದ ಶಿಕ್ಷಣವನ್ನು ಮುಂದುವರಿಸಲು ಸಾಧ್ಯವಾಗದೆ, ಚಿಕ್ಕ ವಯಸ್ಸಿನಲ್ಲಿಯೇ ಜೀವನದ ಜವಾಬ್ದಾರಿಯನ್ನು ಹೊರುವ ಅನಿವಾರ್ಯತೆ ಎದುರಾಯಿತು.

"ಏನಾದರೂ ದುಡಿದು ಕುಟುಂಬಕ್ಕೆ ಆಸರೆಯಾಗಬೇಕು" ಎಂಬ ದೃಢಸಂಕಲ್ಪದೊಂದಿಗೆ ಅವರು ಕ್ರೇನ್ ಕೆಲಸವನ್ನು ಕಲಿಯಲು ಮುಂದಾದರು. ಆರಂಭದಲ್ಲಿ ತರಬೇತಿ ಪಡೆದು, ನಂತರ ಅದನ್ನೇ ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡರು. ಸುಮಾರು ನಾಲ್ಕೈದು ವರ್ಷಗಳ ಕಾಲ ಕ್ರೇನ್ ಆಪರೇಟರ್ ಆಗಿ ದುಡಿದು ಅನುಭವ ಗಳಿಸಿದರು

2003ರಲ್ಲಿ ಉತ್ತಮ ಜೀವನೋಪಾಯಕ್ಕಾಗಿ ವಿದೇಶಕ್ಕೆ ತೆರಳಿದ ಸುಭಾಷ್, ಅಲ್ಲಿ ಸುಮಾರು ಏಳು ವರ್ಷಗಳ ಕಾಲ ಶ್ರಮಪಟ್ಟು ಕೆಲಸ ಮಾಡಿದರು. ನಂತರ ತಾಯ್ನಾಡಿಗೆ ಮರಳಿದ ಅವರು ಕಂಟೈನರ್ ವಾಹನ ಚಾಲಕರಾಗಿ ಹೊಸ ಬದುಕನ್ನು ಆರಂಭಿಸಿದರು. ಜೀವನ ಸರಾಗವಾಗಿ ಸಾಗುತ್ತಿದೆ ಎಂದುಕೊಂಡಿದ್ದಾಗ, ವಿಧಿ ಅವರಿಗಾಗಿ ಮತ್ತೊಂದು ಪರೀಕ್ಷೆಯನ್ನು ಸಿದ್ಧಪಡಿಸಿತ್ತು. ಒಂದು ದಿನ ಹೊಸಪೇಟೆಯಿಂದ ಲೋಕಾಪುರಕ್ಕೆ ಬಾಡಿಗೆ ಸಾಗಿಸುತ್ತಿದ್ದ ಸಂದರ್ಭದಲ್ಲಿ ರಾತ್ರಿ ವೇಳೆಯಾಗಿತ್ತು. ರಸ್ತೆಯಲ್ಲಿದ್ದ ಹಂಪ್ಸ್ ಅವರ ಗಮನಕ್ಕೆ ಬರಲಿಲ್ಲ. ವಾಹನ ವೇಗದಲ್ಲಿದ್ದ ಕಾರಣ, ಹಂಪ್ ದಾಟಿದ ಕ್ಷಣವೇ ಅವರು ಚಾಲಕರ ಆಸನದಿಂದ ಮೇಲಕ್ಕೆ ಎಸೆಯಲ್ಪಟ್ಟು ಮತ್ತೆ ಬಲವಾಗಿ ಸೀಟಿನ ಮೇಲೆ ಬಿದ್ದರು. ಆ ಒಂದು ಕ್ಷಣವೇ ಅವರ ಇಡೀ ಜೀವನದ ದಿಕ್ಕನ್ನೇ ಬದಲಿಸಿತು.

ತಕ್ಷಣವೇ ಅವರನ್ನು ಸಮೀಪದ ಕ್ಲಿನಿಕ್‌ಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ನೀಡಲಾಯಿತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ತೇಜಸ್ವಿನಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಶಸ್ತ್ರಚಿಕಿತ್ಸೆ ನಡೆಸಿದ ವೈದ್ಯರು, ಸುಭಾಷ್ ಅವರ ಬೆನ್ನುಹುರಿಗೆ (Spinal Cord) ಗಂಭೀರ ಗಾಯವಾಗಿದೆ ಎಂದು ತಿಳಿಸಿದರು. ಬೆನ್ನುಹುರಿ ಗಾಯದ ಬಗ್ಗೆ ಮೊದಲೇ ಸ್ವಲ್ಪ ಮಾಹಿತಿ ಹೊಂದಿದ್ದ ಸುಭಾಷ್, ವೈದ್ಯರ ಮಾತು ಕೇಳಿದ ಕ್ಷಣದಲ್ಲೇ ಇನ್ನು ಮುಂದೆ ಹಿಂದಿನಂತೆ ನಡೆಯುವುದು ಸಾಧ್ಯವಿಲ್ಲ ಎಂಬ ಕಠೋರ ಸತ್ಯವನ್ನು ಅರ್ಥಮಾಡಿಕೊಂಡರು. ಆಸ್ಪತ್ರೆಯಲ್ಲಿ ಸುಮಾರು ಒಂದು ತಿಂಗಳು ಚಿಕಿತ್ಸೆ ಪಡೆದು ಮನೆಗೆ ಮರಳಿದರು.

ಅದರ ನಂತರದ ಮೂರು ವರ್ಷಗಳು ಅವರ ಬದುಕಿನ ಅತ್ಯಂತ ಕಠಿಣ ದಿನಗಳಾಗಿದ್ದವು. ಹೆಚ್ಚಿನ ಸಮಯ ಹಾಸಿಗೆಯಲ್ಲಿಯೇ ಕಳೆದರೂ, "ನಾನು ಸಾಧ್ಯವಾದಷ್ಟು ನನ್ನ ಕೆಲಸವನ್ನು ನಾನೇ ಮಾಡಬೇಕು" ಎಂಬ ಮನೋಬಲವನ್ನು ಮಾತ್ರ ಅವರು ಎಂದಿಗೂ ಕಳೆದುಕೊಳ್ಳಲಿಲ್ಲ. ಪ್ರತಿಯೊಂದು ಚಿಕ್ಕ ಕೆಲಸವನ್ನೂ ಅಪಾರ ಕಷ್ಟಪಟ್ಟು ಸ್ವತಃ ಮಾಡಲು ಪ್ರಯತ್ನಿಸುತ್ತಿದ್ದರು.

ನಂತರ ಮಂಗಳೂರಿನ ಎಕ್ಕೂರಿನಲ್ಲಿ ಆಯುರ್ವೇದ ಚಿಕಿತ್ಸೆಯನ್ನು ಪಡೆದು ಸ್ವಲ್ಪ ಮಟ್ಟಿನ ಚೇತರಿಕೆ ಕಂಡರು. ದೇಹದಲ್ಲಿ ಸ್ವಲ್ಪ ಶಕ್ತಿ ಮರಳಿದಂತೆ ಆತ್ಮವಿಶ್ವಾಸವೂ ಹೆಚ್ಚಾಯಿತು. ಇದೇ ಸಮಯದಲ್ಲಿ ಯೂಟ್ಯೂಬ್ ಮತ್ತು ಫೇಸ್‌ಬುಕ್ ಮೂಲಕ ಸೇವಾಧಾಮದ ಬಗ್ಗೆ ತಿಳಿದುಕೊಂಡರು. ಸೇವಾಧಾಮದ ಕ್ಷೇತ್ರ ಸಂಯೋಜಕರು ಅವರ ಮನೆಗೆ ಭೇಟಿ ನೀಡಿ ಪುನಶ್ಚೇತನದ ಮಹತ್ವ ಹಾಗೂ ಸೇವಾಧಾಮದಲ್ಲಿ ದೊರೆಯುವ ತರಬೇತಿಯ ಬಗ್ಗೆ ವಿವರಿಸಿದರು. ಆಗಾಗಲೇ ಸುಭಾಷ್ ತಮ್ಮ ದೈನಂದಿನ ಕೆಲಸಗಳನ್ನು ತಾವೇ ಮಾಡಿಕೊಳ್ಳುವಷ್ಟು ಸ್ವಾವಲಂಬಿಗಳಾಗಿದ್ದರು. ಆದರೆ ಅವರ ಮನಸ್ಸಿನಲ್ಲಿ ಒಂದೇ ಒಂದು ಚಿಂತನೆ ಇತ್ತು.

**ನಾನು ಮನೆಯವರಿಗೆ ಹೊರೆಯಾಗಬಾರದು. ನನ್ನ ಕೈಲಾದಷ್ಟು ದುಡಿದು ಕುಟುಂಬಕ್ಕೆ ಸಹಾಯ ಮಾಡಬೇಕು."**

"ಈ ದೃಢಸಂಕಲ್ಪವೇ ಅವರನ್ನು ಮತ್ತೆ ಉದ್ಯೋಗದತ್ತ ಕರೆದೊಯ್ದಿತು.ತಮ್ಮ ಅಗತ್ಯಕ್ಕೆ ತಕ್ಕಂತೆ ಒಂದು ಆಟೋ ರಿಕ್ಷಾವನ್ನು ವಿಶೇಷವಾಗಿ ಮಾರ್ಪಡಿಸಿಕೊಂಡು, ಅದನ್ನೇ ಜೀವನೋಪಾಯದ ಸಾಧನವನ್ನಾಗಿ ಮಾಡಿಕೊಂಡರು. ದೈಹಿಕ ಮಿತಿಯಿದ್ದರೂ ಅದನ್ನು ಎಂದಿಗೂ ಕಾರಣವನ್ನಾಗಿ ಮಾಡಿಕೊಳ್ಳದೆ, ಪ್ರತಿದಿನ ಆತ್ಮವಿಶ್ವಾಸದಿಂದ ಆಟೋ ಚಲಾಯಿಸಲು ಆರಂಭಿಸಿದರು.

ಒಮ್ಮೆ ಕುಟುಂಬದ ಆಸರೆಯಾಗಿದ್ದ ಸುಭಾಷ್, ಅಪಘಾತದ ನಂತರ ಕುಟುಂಬದವರ ಮೇಲೆಯೇ ಅವಲಂಬಿತರಾಗುವ ಪರಿಸ್ಥಿತಿ ಎದುರಿಸಬೇಕಾಯಿತು. ಆದರೆ ಅದನ್ನೇ ಅವರು ಒಪ್ಪಿಕೊಳ್ಳಲಿಲ್ಲ. ವಿಶೇಷವಾಗಿ ತಮ್ಮ ತಾಯಿ ಮತ್ತು ಅತ್ತಿಗೆಗೆ ತಮ್ಮಿಂದಾದ ಸಹಾಯ ಮಾಡಬೇಕು ಎಂಬ ಸಂಕಲ್ಪದೊಂದಿಗೆ ಮತ್ತೆ ದುಡಿಯಲು ಆರಂಭಿಸಿದರು.ಇಂದು ಸುಭಾಷ್ ಅವರ ಬದುಕು ಪ್ರತಿಯೊಬ್ಬರಿಗೂ ಒಂದು ಪ್ರೇರಣೆಯಾಗಿದೆ. ಬೆನ್ನುಹುರಿ ಅಪಘಾತ ಜೀವನವನ್ನು ನಿಲ್ಲಿಸಬಹುದು, ಆದರೆ ಬದುಕುವ ಛಲವನ್ನು ಎಂದಿಗೂ ನಿಲ್ಲಿಸಲು ಸಾಧ್ಯವಿಲ್ಲ ಎಂಬುದನ್ನು ಅವರು ತಮ್ಮ ಜೀವನದ ಮೂಲಕ ಸಾಬೀತುಪಡಿಸಿದ್ದಾರೆ. ಇಂದು ಅವರು ಗಾಲಿಕುರ್ಚಿಯಲ್ಲಿದ್ದರೂ ಆತ್ಮವಿಶ್ವಾಸದಲ್ಲಿ ಎತ್ತರವಾಗಿ ನಿಂತಿದ್ದಾರೆ. ಸಂಕಷ್ಟಗಳ ಮುಂದೆ ಕೈಚೆಲ್ಲದೆ, ಸ್ವಾವಲಂಬಿ ಬದುಕನ್ನು ಕಟ್ಟಿಕೊಂಡು, "ಮನಸ್ಸು ಗಟ್ಟಿಯಾಗಿದ್ದರೆ ಯಾವುದೇ ಪರಿಸ್ಥಿತಿಯನ್ನೂ ಗೆಲ್ಲಬಹುದು" ಎಂಬ ಸಂದೇಶವನ್ನು ಸಮಾಜಕ್ಕೆ ಸಾರುತ್ತಿದ್ದಾರೆ. ಸುಭಾಷ್ ಅವರ ಬದುಕು ನಿಜಕ್ಕೂ ಪುನಶ್ಚೇತನ, ಆತ್ಮವಿಶ್ವಾಸ ಹಾಗೂ ಅಚಲ ಛಲದ ಜೀವಂತ ಉದಾಹರಣೆಯಾಗಿದೆ.

**ಶುಭಹಾರೈಸಲು ಸಂಪರ್ಕಿಸಿ : 84314 39056**